

# ಉಳಿತಾಯಕ್ಕೆ ನೂರು ದಾರಿ

■ **ಜೆ.ಸಿ.ಜಾಧವ**

ಜೀವನದ ಆದಾಯದ ದಿನಗಳಲ್ಲಿ ನಮ್ಮ ಉಳಿತಾಯದ ಹಣವು ಆಣೆಕಟ್ಟೆಯಂತಿರಬೇಕು. ಕೆಲವೊಂದು ಸಲ ಪ್ರವಾಹ ಬಂದು ಹೆಚ್ಚಿನ ನೀರು ಹರಿದು ಹೋಗುತ್ತದೆ. ಹಾಗೆಯೇ ಅನಿರೀಕ್ಷಿತ ಆದಾಯವು ಕೆಲವೊಂದು ಸಂದರ್ಭದಲ್ಲಿ ಬರಬಹುದು, ಆದರೆ ಅದುವೇ ಶಾಶ್ವತವಲ್ಲ. ಅದರಲ್ಲಿ ಕನಿಷ್ಠ ಶೇ.20 ರಿಂದ 30ಪ್ರತಿಶತದಷ್ಟು ಉತ್ತಮ ಉಳಿತಾಯಗಳಲ್ಲಿ ವಿನಿಯೋಗಿಸಿ. ಹೀಗೆ ಪ್ರವಾಹದಂತೆ ಬಂದ ಆದಾಯವು ಶೇ.70 ರಿಂದ 80ಪ್ರತಿಶತದಷ್ಟು ನಮಗೆ ತಿಳಿಯದೇ ಹೋಗಿಬಿಡುತ್ತದೆ. ಅದರ ಬಗ್ಗೆ ಹೆಚ್ಚು ಯೋಚಿಸಬೇಡಿ. ನಮ್ಮ ದಿನನಿತ್ಯದ ಉತ್ತಮ ಮಾರ್ಗದ ಆದಾಯದಿಂದ ಮಾಡಿದ ಉಳಿತಾಯವು ನಮ್ಮನ್ನು ಸಂಕಷ್ಟದಿಂದ ಪಾರು ಮಾಡುತ್ತದೆಂಬ ಮಾತು ನೆನಪಿನಲ್ಲಿಡಿ.

**ನಮ್ಮ ಉಳಿತಾಯದ ಮೊತ್ತವು ಈ ಕೆಳಗಿನ ಸಂದರ್ಭಗಳಲ್ಲಿ ಸದುಪಯೋಗವಾಗುತ್ತದೆ.**

★ ಮಕ್ಕಳ ವಿದ್ಯಾಭ್ಯಾಸಕ್ಕಾಗಿ
★ ಮನೆ ಕಟ್ಟಿಸುವಾಗ
★ ಮದುವೆ ಹಾಗೂ ಇತರ ಸಮಾರಂಭಗಳಿಗೆ
★ ತುರ್ತು ಅಗತ್ಯಗಳಿಗಾಗಿ
★ ಅನಾರೋಗ್ಯವಾದಾಗ
★ ಜೀವನದ ಸಂಧ್ಯಾಕಾಲದ ನಿವೃತ್ತಿಗಾಗಿ

ಹಾಗಾಗಿ ಉಳಿತಾಯವು ಸಣ್ಣ ಉಳಿತಾಯಗಳಲ್ಲಿ, ಆರ್.ಡಿ.ಗಳಲ್ಲಿ, ಜೀವ ವಿಮೆಯಲ್ಲಿ, ಮ್ಯೂಚುವಲ್ ಫಂಡ್‌ಗಳಲ್ಲಿ, ಬ್ಯಾಂಕ್ ಠೇವಣಿಗಳಲ್ಲಿ, ಸರ್ಕಾರದಿಂದ ಮಾನ್ಯತೆ ಪಡೆದ ಮೂಲಭೂತ ಸೌಕರ್ಯದ ಬಾಂಡ್‌ಗಳಲ್ಲಿ ಹೂಡಿಕೆ, ಸಾರ್ವಜನಿಕ ಭವಿಷ್ಯ ನಿಧಿಯಲ್ಲಿ (ಪಿ.ಪಿ.ಎಫ್) ಉಳಿತಾಯ, ಆಭರಣ ಧರಿಸುವ ಉದ್ದೇಶದಿಂದ ಚಿನ್ನ ಖರೀದಿಸಿ, ಉಳಿತಾಯದ ಉದ್ದೇಶಕ್ಕಾಗಿ ಚಿನ್ನದ ಬಾಂಡ್‌ಗಳಲ್ಲಿ ಉಳಿತಾಯ ಮಾಡಿ, ಪೆನ್ಷನ್ ಯೋಜನೆಗಳಲ್ಲಿ, ಹೀಗೆ ನಮ್ಮ ಉಳಿತಾಯದ ಮೊತ್ತವು ಸಂದರ್ಭಕ್ಕೆ ಅನುಸಾರವಾಗಿ ಉಪಯೋಗವಾಗುವಂತೆ ಯೋಜನೆ ಹಾಕಿಕೊಂಡು ಉಳಿತಾಯ ಮಾಡಿ.

ಈ ವಿಧದ ಯೋಜನೆಗಳ ಬಗ್ಗೆ ಸ್ವಲ್ಪ ವಿವರವಾಗಿ ತಿಳಿಯೋಣ.

ಆರ್.ಡಿ (ನಿರಖು ಠೇವಣಿ): ಹನಿಹನಿ ಕೂಡಿದರೆ ಹಳ್ಳ ಎನ್ನುವ ಮಾತಿನಂತೆ ಮಾಸಿಕ ದುಡಿಮೆಯ(ಆದಾಯದ)ಲ್ಲಿ ಪ್ರತಿ ತಿಂಗಳು ತಮಗೆ ಅನುಕೂಲವೆನಿಸುವಷ್ಟು ಮೊತ್ತವನ್ನು ಉಳಿತಾಯ ಮಾಡುವುದರಿಂದ ಐದು ವರ್ಷಗಳ ಅಥವಾ ಹತ್ತು ವರ್ಷಗಳ ಅವಧಿಗೆ ಯೋಜನೆಯನ್ನು ರೂಪಿಸಿಕೊಂಡು ಉಳಿತಾಯ ಮಾಡಿದರೆ ಅವಧಿಯ ನಂತರ ಒಂದು ಉತ್ತಮ ಮೊತ್ತವು ನಿಮ್ಮ ಕೈಸೇರುತ್ತದೆ.

ಉದಾ: ರೂ.500 ರಂತೆ ಪ್ರತಿ ತಿಂಗಳೂ ಐದು ವರ್ಷಗಳ ಅವಧಿಗೆ ಉಳಿತಾಯ ಮಾಡಿದರೆ (ಪ್ರಸ್ತುತ ಪೋಸ್ಟ್ ಆಫೀಸಿನ ಆರ್.ಡಿ. ದರ ವಾರ್ಷಿಕ ಶೇ.7.1% ದರದಲ್ಲಿ) ಅವಧಿಯ ನಂತರ ರೂ.36,062 ತಮ್ಮ ಕೈ ಸೇರುತ್ತದೆ. ತಾವು ತಿಂಗಳಿಗೆ ರೂ.500ರಂತೆ ವರ್ಷಕ್ಕೆ ರೂ.6000 ತುಂಬುತ್ತೀರಿ, ಐದು ವರ್ಷಕ್ಕೆ ತಾವು ಒಟ್ಟು ರೂ.30,000 ಪಾವತಿಸಿದಂತೆ